11

**ಮಾನ್ಯ ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ ರವಿಕುಮಾರ್ ಎನ್ ಇವರು ಶೂನ್ಯ ವೇಳೆಯ ಪ್ರಸ್ತಾವ ಸಂಖ್ಯೆ:11 ಕ್ಕೆ ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು ಮಾಪನಶಾಸ್ತ್ರ ಇಲಾಖಾ ಸಚಿವರ ಉತ್ತರ.**

*****

**ಸೂಚನೆ:**

**ರಾಜ್ಯ ಸರ್ಕಾರವು ಬಡವರ ಹಸಿವು ನೀಗಿಸಲು 10 ಕೆ.ಜಿ ಅಕ್ಕಿ ನೀಡುವುದಾಗಿ ಸುಳ್ಳು ಭರವಸೆ ನೀಡಿ, ತನ್ನ ವಾಗ್ದಾನ ವಿಫಲಗೊಂಡಿರುವುದರಿಂದ ಬಡವರ ಹಸಿವು ನೀಗಿಸಲು ಅಸಮರ್ಥವಾಗಿದ್ದು, ಬಡ ಜನರು ಹಸಿವಿನಿಂದ ಮೃತಪಡುತ್ತಿರುವ ಬಗ್ಗೆ.**

**ಉತ್ತರ:**

ರಾಜ್ಯ ಸರ್ಕಾರದ ಮಹತ್ವಾಕಾಂಕ್ಷೆಯ ಯೋಜನೆಯಾದ ಅನ್ನ ಭಾಗ್ಯ ಯೋಜನೆಯಡಿ ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಪಡಿತರ ಚೀಟಿಗಳ ಪ್ರತಿ ಫಲಾನುಭವಿಗೆ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯನ್ವಯ ವಿತರಿಸಲಾಗಿರುವ 5 ಕೆ.ಜಿ ಆಹಾರ ಧಾನ್ಯದೊಂದಿಗೆ ಹೆಚ್ಚುವರಿಯಾಗಿ 5 ಕೆ.ಜಿ ಆಹಾರ ಧಾನ್ಯವನ್ನು ಸೇರಿಸಿ ಪ್ರತಿ ಫಲಾನುಭವಿಗೆ 10 ಕೆ.ಜಿ ಆಹಾರ ಧಾನ್ಯವನ್ನು ವಿತರಿಸಲು ಬದ್ಧವಾಗಿದ್ದು, ಪ್ರಸ್ತುತ ಈ ಯೋಜನೆಗೆ ಅಗತ್ಯವಿರುವ ಆಹಾರ ಧಾನ್ಯ ಲಭ್ಯವಾಗುವವರೆಗೆ ರಾಜ್ಯದ ಅರ್ಹ ಪ್ರತಿ ಫಲಾನುಭವಿಗೆ ಪ್ರತಿ ತಿಂಗಳು ಹೆಚ್ಚುವರಿ 5 ಕೆ.ಜಿ ಆಹಾರ ಧಾನ್ಯದ ಬದಲಾಗಿ ಪ್ರತಿ ಕೆ.ಜಿ ರೂ.34/- ರಂತೆ ಪಡಿತರ ಚೀಟಿಯಲ್ಲಿನ ಕುಟುಂಬದ ಮುಖ್ಯಸ್ಥರ ಬ್ಯಾಂಕ್ ಖಾತೆಗೆ ಡಿಬಿಟಿ ಮೂಲಕ ಹಣ ಪಾವತಿಸಲಾಗುತ್ತಿದೆ. ಅದಕ್ಕಾಗಿ ಈಗಾಗಲೇ ಒಟ್ಟು ರೂ.4411.55 ಕೋಟಿ ಮೊತ್ತದ ಹಣವನ್ನು ಜನವರಿ-2024 ರ ಮಾಹೆ ಅಂತ್ಯಕ್ಕೆ ಕೋಟಿ ಅರ್ಹ ಫಲಾನುಭವಿಗಳವರೆಗೆ ಸದರಿ ಯೋಜನೆಯಡಿ ವರ್ಗಾಯಿಸಲಾಗಿದೆ.

ಕರ್ನಾಟಕ ಸರ್ಕಾರವು ಪ್ರತಿ ಫಲಾನುಭವಿಗೆ 10 ಕೆ.ಜಿ. ಅಕ್ಕಿಯನ್ನು ನೀಡುವುದಾಗಿ ಘೋಷಿಸಿತ್ತು. ಪ್ರತಿ ಫಲಾನುಭವಿಗೆ ಹೆಚ್ಚುವರಿಯಾಗಿ 5 ಕೆ.ಜಿ. ವಿತರಿಸಲು ಸುಮಾರು 2.18 ಮೆಟ್ರಿಕ್ ಟನ್ ಅಕ್ಕಿಯನ್ನು ಕೇಂದ್ರ ಸರ್ಕಾರವು ಭಾರತೀಯ ಆಹಾರ ನಿಗಮ (FCI) OMSS(D) ಅಡಿಯಲ್ಲಿ ಖರೀದಿಸಬೇಕಾಗಿತ್ತು. ಆದರೆ, ಸದರಿ ಪ್ರಮಾಣವನ್ನು FCI ಅವರು ನೀಡಲು ನಿರಾಕರಿಸಿತು ಹಾಗೂ ಅವಶ್ಯವಿರುವ ಅಕ್ಕಿಯನ್ನು ಖರೀದಿಸಲು ಪ್ರಯತ್ನಗಳು ನಡೆಯುತ್ತಿವೆ.

ನಾವು ನೀಡಿದ ಭರವಸೆಯಂತೆ ಜನರಿಗೆ ಅನ್ನಭಾಗ್ಯ ಯೋಜನೆಯನ್ನು ಅನುಷ್ಠಾನ ಮಾಡುತ್ತಿದ್ದೇವೆ. ಬಡವರ ಹಸಿವು ನೀಗಿಸಲು ಸಮರ್ಥರಿದ್ದು, 2013ನೇ ಸಾಲಿನಲ್ಲಿ ಶ್ರೀ ಮನಮೋಹನ್ ಸಿಂಗ್ ರವರ ನೇತೃತ್ವದಲ್ಲಿ UPA-2 ಸರ್ಕಾರವು ದೇಶವನ್ನು ಹಸಿವು ಮುಕ್ತ ಮಾಡಲು ಪ್ರತಿಯೊಬ್ಬರಿಗೂ ಆಹಾರ ಖಾತರಿ ನೀಡಲು ಆಹಾರ ಭದ್ರತಾ ಕಾಯ್ದೆ-2013ಅನ್ನು ಜಾರಿಗೆ ತರಲಾಗಿದೆ. ಕರ್ನಾಟಕದಲ್ಲಿ 2013ರಲ್ಲಿ ನಮ್ಮ ಅಂದಿನ ಮತ್ತು ಇಂದಿನ ಮುಖ್ಯಮಂತ್ರಿಗಳಾದ ಶ್ರೀ ಸಿದ್ಧರಾಮಯ್ಯ ರವರು ಅನ್ನಭಾಗ್ಯ ಯೋಜನೆಯನ್ನು ಜಾರಿಗೆ ತಂದಿದ್ದಾರೆ.

ನಾವು ನೀಡಿದ ವಾಗ್ದಾನದಂತೆ ಜನರಿಗೆ ಅಕ್ಕಿ ನೀಡಲು ಸಮರ್ಥರಿದ್ದೇವೆ. ಹಸಿವಿನಿಂದ ಈವರೆಗೆ ಮೃತಪಟ್ಟಿರುವ ಪ್ರಕರಣಗಳು ವರದಿಯಾಗಿಲ್ಲ. ಅದಕ್ಕೆ ಅವಕಾಶವನ್ನು ನೀಡುವುದಿಲ್ಲ.

ಅನ್ನಭಾಗ್ಯ ಯೋಜನೆಯಡಿ ನೇರ ನಗದು ವರ್ಗಾವಣೆ ಯೋಜನೆ ಬಗ್ಗೆ:-

ಕರ್ನಾಟಕ ರಾಜ್ಯದಲ್ಲಿ ಒಟ್ಟು 1,27,51,208 ಪಡಿತರ ಚೀಟಿಗಳು ಹಾಗೂ 4,38,21,980 ಫಲಾನುಭವಿಗಳು ಚಾಲ್ತಿಯಲ್ಲಿರುತ್ತದೆ. ಮಾಹಿತಿ ಕೆಳಕಂಡಂತಿದೆ.

| ಕ್ರ.ಸಂ | ಮಾಹೆ | DBT ಯೋಜನೆಗೆ ಅರ್ಹರಿರುವ ಪಡಿತರ ಚೀಟಿಗಳ ಸಂಖ್ಯೆ | DBT ಯೋಜನೆಗೆ ಅರ್ಹರಿರುವ ಫಲಾನುಭವಿಗಳ ಸಂಖ್ಯೆ | ಒಟ್ಟು ವರ್ಗಾವಣೆ ಮಾಡಿರುವ ಹಣ ರೂ. ಕೋಟಿಗಳಲ್ಲಿ |
|---|---|---|---|---|
| | ಜುಲೈ-2023 | 97,27,165 | 3,45,38,958 | 566.05 |
| | ಆಗಸ್ಟ್-2023 | 1,03,68,897 | 3,69,36,906 | 605.88 |
| | ಸೆಪ್ಟೆಂಬರ್-2023 | 1,08,27,047 | 3,82,62,103 | 627.73 |
| | ಅಕ್ಟೋಬರ್-2023 | 1,10,96,413 | 3,92,74,053 | 644.45 |
| | ನವೆಂಬರ್-2023 | 1,12,12,319 | 3,97,14,391 | 651.72 |
| | ಡಿಸೆಂಬರ್-2023 | 1,12,55,968 | 3,99,25,249 | 655.22 |
| | ಜನವರಿ-2024 (ಚಾಲ್ತಿಯಲ್ಲಿರುತ್ತದೆ) | 1,13,48,463 | 4,02,43,966 | 660.50 |
| | ಒಟ್ಟು | 75836272 | 268895626 | 4411.55 |

ಆನಾಸ 59 ಡಿಆರ್‌ಎ 2023 (ಇ-ಆಫೀಸ್)

(ಕೆ.ಹೆಚ್ ಮುನಿಯಪ್ಪ)

ಮಾನ್ಯ ಆಹಾರ ನಾಗರಿಕ ಸರಬರಾಜು ಮತ್ತು

ಗ್ರಾಹಕರ ವ್ಯವಹಾರಗಳ ಹಾಗೂ ಕಾನೂನು

ಮಾಪನಶಾಸ್ತ್ರ ಇಲಾಖಾ ಸಚಿವರು